ದಿನಾಂಕ 30-05-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ. ಜೆ ಆರ್ ವಕೀಲರಿಂದ

ನಿಡಿ 6 ರಲ್ಲಿರುವ ಜಮೀನು ಕುಷ್ಕಿ ಜಮೀನು ಎಂದು ಬರೆದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ನೀರಾವರಿ ಜಮೀನು ಎಂದು ತೋರಿಸಲು ನೀರಾವರಿ ಇಲಾಖೆಯಿಂದ ನೀಡುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಪಹಣಿ ಪತ್ರವನ್ನು ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ಪಂಪ್‌ಸೆಟ್ ಹಾಕಿರುವ ಬಗ್ಗೆ ತಹಶೀಲ್ದಾರ್ ರವರು ನೀಡಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇವೆ ಎಂದರೆ ಸಾಕ್ಷಿಯು ಬೇರೆಯವರ ಹೊಲದಿಂದ ನೀರನ್ನು ತೆಗೆದುಕೊಳ್ಳೀತೇವೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಾನು ಇಂತಹವರಿಂದಲೇ ನೀರು ಪಡೆಯುತ್ತೇನೆ ಎಂದು ಹೇಳಿ ಬರೆಸಿರುತ್ತೇನೆ. ನಾನು ನನ್ನ ಜಮೀನಿಗೆ ಜವಳಿ ಮುದುಕಪ್ಪರವರ ಹೊಲದಿಂದ ನೀರನ್ನು ಪಡೆಯುತ್ತೇನೆ ಎಂದು ಬರೆಸಿರುತ್ತೇನೆ. ದಾವಾ ಆಸ್ತಿಯು ನೀರಾವರಿ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿ ಮೊದಲು ಕುಷ್ಕಿ ಜಮೀನು ಇತ್ತು ಈಗ

ನೀರಾವರಿ ಜಮೀನು ಆಗಿರುತ್ತದೆ ಎಂದು ನುಡಿದಿರುತ್ತಾರೆ.  ನಿಡಿ.1 ರಲ್ಲಿ ತೋರಿಸಿರುವ ಮೌಲ್ಯದ ಪ್ರಕಾರ ದಾವಾವು ಇದೆ ನ್ಯಾಯಾಲಯದಲ್ಲಿ ಉರ್ಜಿತವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾವು ನ್ಯಾಯಾಲಯದ ಪರ್ಯ್ಯಾದಿಯಲ್ಲಿ ಉರ್ಜಿತವಿದ್ದರೂ ಸಹ ಉದ್ದೇಶ ಪೂರ್ವಕವಾಗಿ ದಾವಾ ನ್ಯಾಯಾಲಯದ ಪರೀವಿಧಿಯಲ್ಲಿ ಬರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.